O.S. NO. 42-2019

PW -2 .

Dated: 24-08-2023.

ಸಾಕ್ಷಿಯನ್ನು ಕರೆಯಿಸಿ ಶಪತವನ್ನು ಬೋಧಿಸಿದೆ.

ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀಎಸ ಎಸ ಎ ವಕೀಲರಿಂದ

ನಾನು ಶಾಲೆಯನ್ನು 2 ನೇ ತರಗತಿ ಮಾತ್ರ ಓದಿದ್ದೇನೆ . ನನಗೆ ಸಹಿ ಮಾಡಲು ಬರುತ್ತದೆ . ಕನ್ನಡ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ . ದಾವೆಯನ್ನು ನನ್ನ ತಂದೆ ಕಲ್ಯಾಣಪ್ಪ ಹೂಡಿದ್ದರು ಎಂದರೆ ಸರಿ . ದಾವೆಯನ್ನು ಕಲ್ಯಾಣಪ್ಪ ಯಾರು ವಿರುದ್ಧ ಯಾರ ಕಾರಣಕ್ಕಾಗಿ ಹೂಡಿದ್ದರು ಅಂತಾ ತಿಳುದಕೊಂಡಿದ್ದೇನೆ . ಯಾವ ಯವಾ ದಾಖಲೆಗಳನ್ನು ಹಾಜರು ಪಡಿಸಿದ್ದೆನೆ ಅಂತಾ ತಿಳಿದುಕೊಂಡಿದ್ದೆನೆ . ಖರೀದಿ ಪತ್ರ ಮರೆಪ್ಪನ ಹೆಸರಲ್ಲಿ ಆಗಿದ್ದನ್ನು ನಮ್ಮ ಹೆಸರಿನಲ್ಲಿ ಮಾಡಿಸಿ ಅಂತಾ ದಾವಾ ಇದೆ . ಮರೆಪ್ಪನ ಪೂರ್ತಿ ಹೆಸರು ನನಗೆ ಗೊತ್ತಿಲ್ಲ . ನಮ್ಮ ಅಜ್ಜ ಸಿದ್ದಪ್ಪ ಅವರಿಗೆ ನಮ್ಮ ತಂದೆ ಕಲ್ಯಾಣಪ್ಪ ಮತ್ತು 5 ಮಕ್ಕಳು ಇದ್ದರು .

ದಾವಾ ಎರಡು ಆಸ್ತಿಗಳು ಇವೆ ಅವುಗಳ ಸರ್ವೇ ನಂಬರುವು ನನಗೆ ಗೊತ್ತಿಲ್ಲ ವಿಸ್ತಿರ್ಣ ಒಂದು 2 ಎಕರೆ ಚಿಲ್ಲರೆ ಮತ್ತೊಂದು ಆಸ್ತಿ 3 ಎಕರೆ ಚಿಲ್ಲರೆ ಇರುತ್ತದೆ . ದಾವಾ ಆಸ್ತಿಗಳ ಚಕಬಂದಿ ಹೇಳುಬರುವುದಿಲ್ಲ . ನಮ್ಮ ಮನೆತನಕ್ಕೆ ಎಷ್ಟು ಆಸ್ತಿ ಇದೆ ಅಂತಾ ನನಗೆ ನೆನಪಿಲ್ಲ .ದಾವಾ ಆಸ್ತಿಗಳು ಯಾರಿಂದ ಬಂತು ಅಂದೆರೆ ನಮ್ಮ ಅಜ್ಜನಿಂದ ಬಂದಿದೆ . ದಾವಾ ಆಸ್ತಿಗಳು ಹಿಸ್ಸೆಯಲ್ಲಿ ನಮ್ಮ ತಂದೆಗೆ ಬಂದಿರುತ್ತದೆ . ನಮ್ಮ ತಂದೆ ಚನ್ನಬಸಯ್ಯ

ಗದಿಗಯ್ಯ ಸರ್ಧಾರವರ ಕಡೆಯಿಂದ ದಾವಾ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ . ನಮ್ಮ ತಂದೆ 1977 ರಲ್ಲಿ ಚನ್ನಬಸಯ್ಯ ಸರ್ದಾರ ಕಡೆಯಿಂದ ಖರೀದಿಸಿದ್ದು ನಾನು ಅಜ್ಜನ ಆಸ್ತಿ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಮ್ಮ ತಂದೆ ಕಲ್ಯಾಣಪ್ಪನಿಗೆ ನಾನು ಒಬ್ಬನೆ ಮಗ ನನಗೆ 5 ಜನ ಮಕ್ಕಳು ಎರಡು ಹೆಣ್ಣು 3 ಗಂಡು ಮಕ್ಕಳು ಇದ್ದಾರೆ ಅವರ ವಯಸ್ಸು ಗಂಡುಮಕ್ಕಳಿಗೆ 25-26 ವರ್ಷ . ನಮ್ಮ ಮಕ್ಕಳು ಎಲ್ಲರೂ ತಿಳುವಳಿಕಸ್ತರು ಎಂದರೆ ಸರಿ. ನನ್ನ ಒಬ್ಬ ಮಗ ಐಟಿ ಐ ಮತ್ತು ಇಬ್ಬರು ಡಿಪ್ಲೊಮೊ ಮಾಡಿದ್ದಾರೆ . ನಮ್ಮ ತಂದೆ ಮನೆತನದ ಹಿರಿಯವರು ಎಂದರೆ ಸರಿ . ನಮ್ಮ ತಂದೆ ಮನೆತನದ ಹಿರಿತನವನ್ನು ಮಾಡುತ್ತಿದ್ದರು ಎಂದರೆ ಸರಿ .

ದಾವಾ ಮಾಡುವ ಮುಂಚಿತವಾಗಿ ಕಿತ್ತೂರ ನ್ಯಾಯಾಲಯದಲ್ಲಿ ನಮ್ಮ ತಂದೆ ಕಲ್ಯಾಣಪ್ಪನವರು ಒಂದು ದಾವಾ ಹೂಡಿದ್ದರು ಎಂದರೆ ಸರಿ . ಅದು Hon'ble High Court of Karnataka, ನಲ್ಲಿ ಸ್ಟೆ ಕೂಡಾ ಆಗಿತ್ತು ಎಂದರೆ ಸರಿ . ನಾನು ಸಲ್ಲಿಸಿದ ಪಿರ್ಯಾದು ಇನ್ನು ಚಾಲ್ತಿಯಲ್ಲಿದೆ . ನಾನು ಸಲ್ಲಿಸಿದ್ದ PC no 23/2019 ವಜಾ ಆಗಿದೆ ಎಂದರೆ ನೆನಪಿಲ್ಲ . ಅನಿಲ ಸಂಜಯ ಸುರೇಶ ಲಕ್ಷೀ ಸುಜಾತ ಎಲ್ಲಾ ನನ್ನ ಮಕ್ಕಳು ನನ್ನ ವಿರುದ್ಧ ಮತ್ತು ಮರೆಪ್ಪನ ವಿರುದ್ಧ ಒಂದು ವಾಟ್ನಿ ದಾವಾ ಹೊಡಿದ್ದರು ಎಂದರೆ ಸರಿ . ಸದರಿ ವಾಟ್ನಿ ದಾವೆಯಲ್ಲಿ ಕೂಡ ಖರೀದಿ ಪತ್ರದ ಸಂಬಧಿಸಿದಂತೆ ಪ್ರಾರ್ಥನೆ ಇತ್ತು ಎಂದರೆ ನೆನಪಿಲ್ಲ . ಕಿತ್ತೂರಿನ ದಾವಾದಲ್ಲಿ ನಾನು ತಕರಾರು ಸಲ್ಲಿಸಿ ಹಾಜರು ಆಗಿಲ್ಲ . ಪ್ರಕರಣದ

ಬಗ್ಗೆ ನನ್ನ ಮಕ್ಕಳಿಂದ ಕೇಳಿ ತಿಳಿದುಕೊಂಡಿದ್ದೇನೆ . ನಮ್ಮ ತಂದೆಗೆ ನಾನು ಒಬ್ಬನೇ ಮಗ ಎಂದರೆ ಸರಿ . ದಾವಾ ಆಸ್ತಿಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಆಗಿದೆ ಎಂದರೆ ಸರಿಯಲ್ಲ . ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ . ನನ್ನ ಮಕ್ಕಳು ಅವಿವಾಹಿತರು . ಎಲ್ಲರೂ ವಿದ್ಯಾಂವತರು . ಮನೆತನದ ಎಲ್ಲಾ ಖರ್ಚು ವೆಚ್ಚ ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ . ಮನೆತನದ ಎಲ್ಲಾ ಖರ್ಚುಗಳಿಗೆ ಮನೆತನದ ಆದಾಯ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ . ನಮ್ಮ ಮನೆತನದ ಆದಾಯ ಸಾಕಾಗುತ್ತಿರಲಿಲ್ಲದ ಕಾರಣ ನಮ್ಮ ತಂದೆ ಸಾಲ ಮಾಡುತ್ತಿದ್ದರು ಎಂದರೆ ಸರಿಯಲ್ಲ . ನಮ್ಮ ತಂದೆ ಸ್ವಂತ ಒಕ್ಕಲುತನ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ . ನನ್ನ ಮಕ್ಕಳು ಕೂಡ ಶಾಲೆ ಕಲಿತಿಲ್ಲ ನಮ್ಮ ತಂದೆಗಾಗಲಿ ನಮಗಾಗಲಿ ಒಕ್ಕಲುತನ ಮಾಡಲು ಸಾಧ್ಯ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ . ಹೀಗಾಗಿ ನಮ್ಮ ತಂದೆಯವರು ದಾವಾದ ಆಸ್ತಿಗಳನ್ನು ಮಾರಾಟಕ್ಕೆ ಹಚ್ಚಿರುತ್ತಾರೆ ಎಂದರೆ ಸರಿಯಲ್ಲ . ಸದರಿ ವಿಚಾರ ಪ್ರತಿವಾದಿಗೆ ಗೊತ್ತಾಗಿ 13 ಲಕ್ಷದಾ 55 ಸಾವಿರ ರೂಪಾಯಿಗೆ ಖರೀದಿಗೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ . ನಮ್ಮ ತಂದೆಗೆ ಖರೀದಿ ಪತ್ರ ಬರೆಯಲು ಮಾಹಿತಿ ಕೊಟ್ಟು ನಂತರ ಅವರೇ ಸಹಿ ಕೂಡ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಖರೀದಿ ದಿನವೇ ಪ್ರತಿವಾದಿ ಸಂಪೂರ್ಣ ಹಣವನ್ನು ನಮ್ಮ ತಂದೆಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ಖರೀದಿ ವ್ಯವಹಾರದ ಬಗ್ಗೆ ನನಗೂ ಮತ್ತು ನಮ್ಮ ತಂದೆಗೂ ಮಾಹಿತಿ ಇತ್ತು ಎಂದರೆ ಸರಿಯಲ್ಲ . ದಾವಾದ ಆಸ್ತಿಗಳ ಕಿಮ್ಮತ್ತು

ಹೆಚ್ಚಾದ ಕಾರಣ ಈಗ ಖರೀದಿ ವ್ಯವಹಾರ ಪ್ರಶ್ನೆ ಮಾಡಿ ಸುಳ್ಳು ದಾವಾ ಹೂಡಿದ್ದೇನೆ ಎಂದರೆ ಸರಿಯಲ್ಲ . ದಾವಾದ ಆಸ್ತಿ ಖರೀದಿ ಆದ ನಂತರ ನನ್ನ ಮಗ ಸಂಜಯ ತಹಶೀಲ್ದಾರ ಕಚೇರಿಗೆ ತಕರಾರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ . ತಹಶೀಲ್ದಾರ ವಿಚಾರಣೆ ಮಾಡಿದ ನಂತರ ಪ್ರತಿವಾದಿಯ ಹೆಸರಿಗೆ ಡೈರಿ ಮಂಜೂರು ಮಾಡಿರುತ್ತಾರೆ ಎಂದರೆ ಸರಿ . ನಮ್ಮ ತಂದೆ ತಹಶೀಲ್ದಾರ ನ್ಯಾಯಾಲಯದಲ್ಲಿ ಹಾಜರು ಆಗಿದ್ದರು ಎಂದರೆ ಗೊತ್ತಿಲ್ಲ . ನನ್ನ ತಂದೆ ತಹಶೀಲ್ದಾರ ಅವರ ಮುಂದೆ ಖರೀದಿ ಕೊಟ್ಟ ಬಗ್ಗೆ ಒಪ್ಪಿಕೊಂಡಿದ್ದು ಪ್ರತಿವಾದಿಯ ಹೆಸರು ದಾಖಲಿಸಲು ಲೇಖಿ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ . ಸದರಿ ಡೈರಿಯನ್ನು ನಾನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ .

ನಮ್ಮ ತಂದೆಗೆ ಮಾನಸಿಕವಾಗಿ ಕಾಯಿಲೆ ಇತ್ತು ಅಂತಾ ತೋರಿಸಲು ವೈದ್ಯರ ಪ್ರಮಾಣ ಪತ್ರ ಹಾಜರು ಪಡಿಸಿಲ್ಲ ಎಂದರೆ ನಮ್ಮ ತಂದೆ ಆರಾಮ ಆಗಿ ಇದ್ದರು. ನಮ್ಮ ತಂದೆ ದೈಹಿಕ ಅಥವಾ ಮಾನಸಿಕ ಕಾಯಿಲೆ ಇರಲಿಲ್ಲ . ನಮ್ಮ ತಂದೆ ಅವರಿಗೆ ದೈಹಿಕ, ಮಾನಸಿಕ ಕಾಯಿಲೆ ಇದೆ ಅಂತಾ ವವಕೀಲರಿಗೆ ಮಾಹಿತಿ ಕೊಟ್ಟಿದ್ದರೂ ಇಲ್ಲವೋ ನನಗೆ ಮಾಹಿತಿ ಇಲ್ಲ . ಪ್ರತಿವಾದಿ ಮೋಸದಿಂದ ಖರೀದಿ ಪತ್ರ ಮಾಡಿಕೊಂಡ ಬಗ್ಗೆ ಪೊಲಿಸರಿಗೆ ದೂರು ಕೊಟ್ಟಿದ್ದೇನೆ . ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ . ಪ್ರತಿವಾದಿ ಮೋಸದಿಂದ ಖರೀದಿ ಪತ್ರ ಮಾಡಿಕೊಂಡ ಬಗ್ಗೆ ನಾವ್ಯಾರು ಪೊಲಿಸರಿಗೆ ದೂರು ಕೊಟ್ಟಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಮ್ಮ ತಂದೆ ಬೇರೆಯವರ

ಮನೆತನದಲ್ಲಿ ಹಿರೇತನ ಮಾಡುತ್ತಿರಲಿಲ್ಲ ಎಂದರೆ ಮಾಡುತ್ತಿದ್ದರು . ಬೇರೆ ಸಮುದಾಯದ ಮನೆತನದ ವಿಚಾರದಲ್ಲಿ ನಮ್ಮ ತಂದೆ ಹಿರೇತನ ಮಾಡುತ್ತಿರಲಿಲ್ಲ ಎಂದರೆ ಸರಿ . ನಮಗೆ ಮರೇಪ್ಪ ಮೊದಲು ಪರಿಚಯ ಇರಲಿಲ್ಲ . ನಾವು ಕುರುಬ ಸಮೂದಾಯಕ್ಕೆ ಸೇರಿದವರು ಎಂದರೆ ಸರಿ . ಪ್ರತಿವಾದಿ ದಲಿತ ಸಮುದಾಯದವರು ಎಂದರೆ ಗೊತ್ತಿಲ್ಲ . ಪ್ರತಿವಾದಿ ಮನೆತನದ ಸಮಾರಂಭಕ್ಕೆ ನಮ್ಮ ತಂದೆ ಭಾಗವಹಿಸುವ ಪ್ರಶ್ನೆ ಇಲ್ಲ ಎಂದರೆ ಸರಿಯಲ್ಲ . ನಮಗೂ ಮತ್ತು ನಿಂಗಪ್ಪ ಸಿದ್ದಪ್ಪ ಕೊಟಬಾಗಿ ಶಿವಾನಂದ ನಾಗಪ್ಪ ದುಪದಾಳ ಅವರಿಗೆ ವೈಮನಸ್ಸು ವೈರತ್ವ ಇಲ್ಲ . ನಮ್ಮ ತಂದೆಗೆ ಮಾನಸಿಕ, ದೈಹಿಕ ಆರೋಗ್ಯ ಸರಿ ಇಲ್ಲದ ಕಾರಣ ತಂದೆಯೊಂದಿಗೆ ಯಾರು ವ್ಯವಹಾರ ಮಾಡಬಾರದು ಎಂದು ಪತ್ರಿಕಾ ಪ್ರಕಟಣೆ ಕೊಟ್ಟಿಲ್ಲ . ನಮ್ಮ ತಂದೆಗೆ ಮಾನಸಿಕ, ದೈಹಿಕ ಆರೋಗ್ಯ ಚೆನ್ನಾಗಿದ್ದು ಅವರು ಸ್ವಖುಷಿಯಿಂದ ಪ್ರತಿವಾದಿ ಹೆಸರಿಗೆ ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ .

ಪ್ರತಿವಾದಿ ಮರೆಪ್ಪ ಕಿತ್ತೂರು ಮತ್ತು ಬೈಲಹೊಂಗಲದಲ್ಲಿ ವಕೀಲರಾಗಿದ್ದಾರೆ ಎಂದರೆ ಸರಿ . ಪ್ರತಿವಾದಿ ಸಿವಿಲ ಕ್ರಿಮಿನಲ ಮತ್ತು ಎಮವಿಸಿ ಪ್ರಕರಣಗಳನ್ನು ನಡೆಸುತ್ತಾರೆ ಎಂದರೆ ಗೊತ್ತಿಲ್ಲ . ಪ್ರತಿವಾದಿ ವಕೀಲಕಿಯಿಂದ ಸಾಕಷ್ಟು ಉತ್ಪನ್ನ ಇದೆ ಎಂದರೆ ಗೊತ್ತಿಲ್ಲ . ಪ್ರತಿವಾದಿ ಮನೆತನಕ್ಕೆ ಸಾಕಷ್ಟು ಹೊಲಗಳು ಇವೆ ಎಂದರೆ ಗೊತ್ತಿಲ್ಲ . ಪರತಿವಾದಿ ಸಾಕಷ್ಟು ಉತ್ಪನ್ನ ಹೊಂದಿದ್ದು ಅವರು ತಮ್ಮ ಉತ್ಪನ್ನದಿಂದ ದಾವಾದ ಆಸ್ತಿಯನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ . ಮತ್ತೂಟ ಫೈನಾನ್ಸದಿಂದ ಪ್ರತಿವಾದಿ 89,025/- ರೂಪಾಯಿ ಸಾಲ

ಖರೀದಿ ಮಾಡುವ ಸಲುವಾಗಿಯೇ ಪಡೆದಿದ್ದರು ಎಂದರೆ ಗೊತ್ತಿಲ್ಲ . ಎಸಬಿಐ ಕಿತ್ತೂರ ಒಮ್ಮೆ 2 ಲಕ್ಷ ಮತ್ತೊಮ್ಮೆ 3 ಲಕ್ಷ ರೂಪಾಯಿಯನ್ನು ಖಾತೆಯಿಂದ ಪಡೆದುಕೊಂಡು ನಮ್ಮ ತಂದೆಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ವಕೀಲಕಿಯಿಂದ ಕೂಡ ಸಾಕಷ್ಟು ಆದಾಯ ಇದ್ದು ಸಂಪೂರ್ಣ ಖರೀದಿ ಹಣ ನಮ್ಮ ತಂದೆಗೆ ಪಾವತಿ ಮಾಡಲಾಗಿದೆ ಎಂದರೆ ಸರಿಯಲ್ಲ .ಖರೀದಿ ಪತ್ರದ ನಂತರ ದಾವಾದ ಆಸ್ತಿಗಳು ಕಬ್ಜಾ ಪ್ರತಿವಾದಿಯ ಕಬ್ಜಾ ಹೊಂದಿದ್ದಾರೆ ಎಂದರೆ ಸರಿಯಲ್ಲ . ನಾನು ಕಬ್ಜಾದಲ್ಲಿ ಇದ್ದೇನೆ . ಖರೀದಿ ಪತ್ರ ಸರಿಯಾಗಿ ಆಗಿದ್ದರೂ ಸಹ ಈಗ ಜಮೀನಿನ ಬೆಲೆ ಹೆಚ್ಚಾಗಿರುವ ಕಾರಣ ಸುಳ್ಳು ದಾವಾ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆಃ ಇಲ್ಲ

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.

GRL